ವ್ಯಕ್ತಿತ್ವದಿಂದ, ಪ್ರೇಮಾಯತನಕ್ಕೆ ಧಾರ್ಮಿಕ, ಜ್ಞಾನಶಿಸ್ತೀಯ ಕಲಾಮಾಧ್ಯಮದ ಹಾಗೂ ಭಾಷಿಕ ಬಹುತ್ವದ ಆಯಾಮಗಳು ಪ್ರಾಪ್ತಿಯಾದವು. ಆಶ್ರಮವು ಶಿಕ್ಷಣ, ಹೋರಾಟ, ಸಂಗೀತ, ಪತ್ರಿಕೋದ್ಯಮ, ಅಧ್ಯಾತ್ಮ, ಯೋಗ, ಆಯುರ್ವೇದ, ರಸಶಾಸ್ತ್ರಗಳನ್ನು ಕಲಿಸುವ ಇಂಟಿಗ್ರೇಟೆಡ್ ಸಂಸ್ಥೆಯಾಗಿತ್ತು. ಹಲವು ದಿಕ್ಕಿನಿಂದ ಬಂದ ಆಸಕ್ತ ಜನರನ್ನು ಕೂಡಿಸುವ ಚುಂಬಕ ಕೇಂದ್ರವಾಗಿತ್ತು. ಅಲ್ಲಿ ಭಾರತದ ಹಲವು ಭಾಷೆಗಳು ಸಂಗಮಿಸಿದ್ದವು. ತಾರಾನಾಥರ ಮನೆಮಾತು ಕೊಂಕಣಿ. ಪತ್ನಿ ತಮಿಳರು. ಹೈದರಾಬಾದಿನಲ್ಲಿ ಬೆಳೆದಿದ್ದರಿಂದ ಉರ್ದು–ತೆಲುಗು ಬರುತ್ತಿತ್ತು. ಕನ್ನಡ, ಉರ್ದು, ಹಿಂದಿ, ಇಂಗ್ಲಿಷ್‌ಗಳಲ್ಲಿ ಸ್ವತಃ ಬರೆಯುತ್ತಿದ್ದರು. ಅವರ 'ಕಬೀರ್' ನಾಟಕ ಹಿಂದಿಯಲ್ಲಿದೆ. ಅದನ್ನು ನೋಡಿದ ಬಳಿಕ ಗಾಂಧಿ, 'ದಕ್ಷಿಣ ಭಾರತದಲ್ಲಿ ಹಿಂದಿ ಭಾಷೆಯನ್ನು ಬರೆಯಬಲ್ಲಿರಿ, ಮನೋಹರವಾಗಿಯೂ ಸುಂದರವಾಗಿಯೂ ಉಚ್ಚರಿಸಬಲ್ಲಿರಿ' ಎಂದು ಶಹಬಾಸಗಿರಿ ನೀಡಿದರಂತೆ. ಹಮ್‌ದರ್ದ್ ಶಾಲೆಯಲ್ಲೂ ಇಂಗ್ಲಿಷ್, ಉರ್ದು, ಕನ್ನಡಗಳಲ್ಲಿ ಕಲಿಸಲಾಗುತ್ತಿತ್ತು. ಪ್ರೇಮಾಯತನವು ಜ್ಞಾನಶಾಸ್ತ್ರೀಯ ಮತ್ತು ಭಾಷಿಕ ಬಹುತ್ವದಿಂದ ಕೂಡಿದ ಪುಟ್ಟ ಭಾರತವಾಗಿತ್ತು. ಅದರ ಬಹುತ್ವವು, ಬಾಳಿನ ಬೇರೆಬೇರೆ ಮುಖಗಳು, ತಿಳಿವಿನ ವಿಭಿನ್ನ ಶಿಸ್ತುಗಳು ಹಾಗೂ ಸಮಾಜದ ಹಲವು ಕಾರ್ಯಕ್ಷೇತ್ರಗಳು ಒಂದು ಆಶಯಕ್ಕಾಗಿ ಪರಸ್ಪರ ಪೂರಕವಾಗಿ ಕೆಲಸ ಮಾಡುವ, ಪಾರಂಪರಿಕ ವಿವೇಕದ ಅಭಿವ್ಯಕ್ತಿಯೂ ಆಗಿತ್ತು.

ತಾರಾನಾಥರ ಚಿಂತನೆ ಮತ್ತು ಕ್ರಿಯಾಶೀಲತೆಗಳಲ್ಲಿ ರಾಜಾರಾಮ ಮೋಹನರಾಯರ ಸುಧಾರಣವಾದವಿತ್ತು; ಗಾಂಧಿಯ ರಾಜಕೀಯ ಪ್ರಜ್ಞೆಯಿತ್ತು. ಕಾರಂತರ ಪ್ರಯೋಗಶೀಲತೆಗಳಿದ್ದವು. ಕಬೀರನ ವೈಚಾರಿಕತೆ ಮತ್ತು ಸೂಫಿಗಳ ಪ್ರೇಮತತ್ವಗಳು ಮಿಳಿತವಾಗಿದ್ದವು. ಹಲವು ಭಾಷೆ ಮತ್ತು ಜ್ಞಾನಶಾಖೆಗಳನ್ನು ಒಟ್ಟಿಗೆ ಕಲಿವ–ಕಲಿಸುವ ಬಹುಶಿಸ್ತೀಯತೆ ಇತ್ತು. ಪ್ರೇಮಾಯತನದ ಗ್ರೂಪ್‌ಫೋಟೊಗಳು ಕೂಡ ಕೂಡುಸಮಾಜದ ಮುಂಗಾಣ್ಕೆಯಬನ್ನು ಬಿಂಬಿಸುತ್ತವೆ. ತುಂಗಭದ್ರಾ ಆಸುಪಾಸಿನ ರಾಂಪುರ, ಮಾದವಾರ, ಬಸಾಪುರ, ದಿಬ್ಬನದೊಡ್ಡಿ, ಸಾಸನೂರು, ಅಗಸನೂರು, ಕಚ್ಲಾಪುರಂ, ಮಟಮಾರಿ, ಬಿಚ್ಚಾಲಿ ಹಳ್ಳಿಗಳ ಜನರೊಂದಿಗೆ ಪ್ರೇಮಾಯತನಕ್ಕೆ ಕರುಳ ಬಳ್ಳಿಯ ನಂಟು ಏರ್ಪಟ್ಟಿತ್ತು. ಒಂದು ಆಶ್ರಮ ಅಥವಾ ಸಂಸ್ಥೆಯ ಜತೆ ಸ್ಥಳೀಯರು ಇಟ್ಟುಕೊಂಡಿರುವ ಜೈವಿಕ ಸಂಬಂಧವು, ಆ ಸಂಸ್ಥೆ ರಾಷ್ಟ್ರೀಯವೊ ಅಂತರರಾಷ್ಟ್ರೀಯವಾಗಿಯೊ ಖ್ಯಾತಿ ಗಳಿಸುವುದಕ್ಕಿಂತ ಮುಖ್ಯವಾದುದು. ಪ್ರೇಮಾಯತನವು ಕರ್ನಾಟಕ ಸಂಸ್ಕೃತಿ ಸೃಷ್ಟಿಸಿದ ವಿಶಿಷ್ಟ ಗುರುಕುಲ. ಇಂತಹುದೇ ಪ್ರಯೋಗಗಳನ್ನು, ಮುರಗೋಡ ಮಹದೇವಪ್ಪ, ಮಂಗಳೂರಿನ ಕುದ್ಮಲ್ ರಂಗರಾವ್, ಶಿವಗಿರಿಯ ನಾರಾಯಣಗುರು, ವಿಜಯವಾಡದ ಗೋರಾ, ಸಾಲಿಗ್ರಾಮದ ಶಿವರಾಮ ಕಾರಂತರು ತಮ್ಮ ಊರುಗಳಲ್ಲಿ ಮಾಡಿದರು. ಗಾಂಧಿವಾದಿಯೂ ಸ್ವಾತಂತ್ರ್ಯ ಹೋರಾಟಗಾರರೂ ಅಸ್ಪೃಶ್ಯತಾ ನಿವಾರಣ ಚಳವಳಿಗಾರರೂ ನಾಸ್ತಿಕವಾದಿ ವೈಚಾರಿಕತೆಯ ಪ್ರತಿಪಾದಕರೂ ಆಗಿದ್ದ ಗೋರಾ, ತಮ್ಮ ಆಶ್ರಮದಲ್ಲಿ ಮಾಡಿದ ಸಾಮಾಜಿಕ ಪ್ರಯೋಗಗಳು, ಪ್ರೇಮಾಯತನದ ಪ್ರಯೋಗಗಳಿಗಿಂತ ಹೆಚ್ಚು ಕ್ರಾಂತಿಕಾರಕವಾಗಿದ್ದವು. ಯಾರಾದರೂ ಭಾರತದ ಈ ಪ್ರಯೋಗಶೀಲ ಆಶ್ರಮಗಳನ್ನು ತೌಲನಿಕವಾಗಿ ಅಧ್ಯಯನ ಮಾಡಬೇಕು.

## ಹೊಳೆ ಹರಿಯುತಿದೆ

ಪ್ರೇಮಾಯತನವು ತುಂಗಭದ್ರಾದಲ್ಲಿ ನೆಲೆನಿಂತಿದ್ದರೂ, ಅದರ ಕಾರ್ಯಚಟುವಟಿಕೆಗಳು, ಹೈದರಾಬಾದ್, ರಾಯಚೂರು, ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ನವಲಗುಂದ, ಯಾದಗಿರಿ, ಬಳ್ಳಾರಿ, ಚಿಕ್ಕಮಗಳೂರುಗಳಲ್ಲಿದ್ದ ಶಾಖೆಗಳ ಮೂಲಕ ಹರಡಿದ್ದವು. ಸುಮತಿಯವರ ಸೋದರ